# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 251 |
| ಸದಸ್ಯರ ಹೆಸರು | : | ಶ್ರೀ ಎಂ. ನಾರಾಯಣ ಸ್ವಾಮಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |
| ಉತ್ತರಿಸುವ ದಿನಾಂಕ | : | 14-12-2021 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಮಹಿಳೆಯರು ಹಾಗೂ ಮಕ್ಕಳಲ್ಲಿ ಪೌಷ್ಠಿಕಾಂಶದ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡ ಯೋಜನೆಗಳಾವುವು; | ಮಹಿಳೆಯರಲ್ಲಿ ಪೌಷ್ಠಿಕಾಂಶದ ಕೊರತೆ ನೀಗಿಸಲು ಅಂಗನವಾಡಿ ಕೇಂದ್ರಗಳ ಮೂಲಕ ಈ ಕೆಳಕಂಡ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>• ಅಂಗನವಾಡಿ ಕೇಂದ್ರಗಳಲ್ಲಿ ಗರ್ಭಿಣಿ / ಬಾಣಂತಿಯರಿಗೆ ಮಾತೃಪೂರ್ಣ ಯೋಜನೆಯಡಿ ಪ್ರತಿ ಫಲಾನುಭವಿಗೆ ರೂ.21/- ರ ಘಟಕ ವೆಚ್ಚದಲ್ಲಿ ಮಧ್ಯಾಹ್ನದ ಬಿಸಿಯೂಟವನ್ನು ನೀಡಲಾಗುತ್ತಿದ್ದು, ಇದರಲ್ಲಿ, ಅನ್ನ, ಸಾಂಬಾರ್, ಪಲ್ಯ, ಮೊಟ್ಟೆ, ಹಾಲು, ಶೇಂಗಾಚಿಕ್ಕಿ ಒಳಗೊಂಡಿರುತ್ತದೆ. ಪ್ರಸ್ತುತ ಕೋವಿಡ್-19ರ ಹಿನ್ನೆಲೆಯಲ್ಲಿ ಆಹಾರ ಪದಾರ್ಥಗಳನ್ನು ಫಲಾನುಭವಿಗಳ ಮನೆಗೆ ನೀಡಲಾಗುತ್ತಿದೆ.<br>• ಪ್ರಧಾನ ಮಂತ್ರಿ ಮಾತೃವಂದನಾ ಯೋಜನೆಯಡಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಮಹಿಳೆಯ ಮೊದಲ ಪ್ರಸವದ ಮತ್ತು ನಂತರದ ಸಾಕಷ್ಟು ವಿಶ್ರಾಂತಿಗಾಗಿ ಹಾಗೂ ಆರೋಗ್ಯದಲ್ಲಿ ಸುಧಾರಣೆ ಕಾಣಲು ಆಂಶಿಕ ಪರಿಹಾರ ರೂ.5,000/-ಗಳ ಸಹಾಯಧನವನ್ನು ಮೂರು ಕಂತುಗಳಲ್ಲಿ ನೇರ ನಗದು ವರ್ಗಾವಣೆ ಮೂಲಕ ಫಲಾನುಭವಿಗಳ ಖಾತೆಗೆ ವರ್ಗಾಯಿಸಲಾಗುತ್ತಿದೆ.<br>ಮಕ್ಕಳ ಪೌಷ್ಠಿಕಾಂಶದ ಕೊರತೆಯನ್ನು ನೀಗಿಸಲು ಅಂಗನವಾಡಿ ಕೇಂದ್ರಗಳ ಮೂಲಕ ಈ ಕೆಳಕಂಡ ಕ್ರಮವಹಿಸಲಾಗುತ್ತಿದೆ.<br>• ನೊಂದಾಯಿಸಲ್ಪಟ್ಟ ಎಲ್ಲಾ ಮಕ್ಕಳಿಗೆ ಅಂಗನವಾಡಿ ಕೇಂದ್ರದಲ್ಲಿ ಪ್ರತಿ ದಿನ ರೂ.8.00 ಮೌಲ್ಯದ ಪೂರಕ ಪೌಷ್ಠಿಕ ಆಹಾರವನ್ನು ನೀಡಲಾಗುತ್ತಿದೆ.<br>• ತೀವ್ರ ಅಪೌಷ್ಠಿಕ ಮಕ್ಕಳಿಗೆ ಪ್ರತಿ ದಿನ ರೂ.12.00 ಮೌಲ್ಯದ ಪೂರಕ ಪೌಷ್ಠಿಕ ಆಹಾರವನ್ನು ನೀಡಲಾಗುತ್ತಿದೆ.<br>• ಅಂಗನವಾಡಿಗೆ ಹಾಜರಾಗುವ 3 ವರ್ಷದಿಂದ 6 ವರ್ಷದ ಎಲ್ಲಾ ಮಕ್ಕಳಿಗೆ ವಾರದಲ್ಲಿ 2 ದಿನ ಮೊಟ್ಟೆಯನ್ನು ನೀಡಲಾಗುತ್ತಿದೆ.<br>• ರಾಜ್ಯ ಸರ್ಕಾರದ ಕ್ಷೀರಭಾಗ್ಯ ಯೋಜನೆಯಡಿ 6 ತಿಂಗಳಿಂದ 6 ವರ್ಷದ ಎಲ್ಲಾ ಅಂಗನವಾಡಿ ಮಕ್ಕಳಿಗೆ ವಾರದಲ್ಲಿ 5 ದಿನ 150 ಮಿ.ಲೀ. ಹಾಲನ್ನು (15ಗ್ರಾಂ ಕೆನೆಭರಿತ ಹಾಲಿನಪುಡಿ, 10 ಗ್ರಾಂ ಸಕ್ಕರೆ) ನೀಡಲಾಗುತ್ತಿದೆ. |

| | | |
|---|---|---|
| | | • 6 ತಿಂಗಳಿಂದ 3 ವರ್ಷದ ತೀವ್ರ ಅಪೌಷ್ಠಿಕ ಮಕ್ಕಳಿಗೆ ಮತ್ತು 5 ಹಿಂದುಳಿದ ಜಿಲ್ಲೆಗಳಾದ ಬೀದರ್, ಕಲಬುರಗಿ, ರಾಯಚೂರು, ಯಾದಗಿರಿ ಮತ್ತು ಕೊಪ್ಪಳ ಇಲ್ಲಿಯ ಸಾಧಾರಣ ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ 3 ದಿನ ಮೊಟ್ಟೆ ಹಾಗೂ 3 ದಿನ 200 ಎಂ.ಎಲ್ ಹಾಲನ್ನು, ಮೊಟ್ಟೆ ಸ್ವೀಕರಿಸದಿರುವ ಮಕ್ಕಳಿಗೆ ವಾರದಲ್ಲಿ 6 ದಿನ ಹಾಲನ್ನು ನೀಡಲಾಗುತ್ತಿದೆ.<br>• 3 ವರ್ಷದಿಂದ 6 ವರ್ಷದ ತೀವ್ರ ಅಪೌಷ್ಠಿಕ ಮಕ್ಕಳಿಗೆ ಮತ್ತು 5 ಹಿಂದುಳಿದ ಜಿಲ್ಲೆಗಳಾದ ಬೀದರ್, ಕಲಬುರಗಿ, ರಾಯಚೂರು, ಯಾದಗಿರಿ ಮತ್ತು ಕೊಪ್ಪಳ ಇಲ್ಲಿಯ ಸಾಧಾರಣ ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ 5 ದಿನ ಮೊಟ್ಟೆ ಹಾಗೂ 3 ದಿನ 200 ಎಂ.ಎಲ್ ಹಾಲನ್ನು, ಮೊಟ್ಟೆ ಸ್ವೀಕರಿಸದಿರುವ ಮಕ್ಕಳಿಗೆ ವಾರದಲ್ಲಿ 6 ದಿನ ಹಾಲನ್ನು ನೀಡಲಾಗುತ್ತಿದೆ.<br>• ತೀವ್ರ ಅಪೌಷ್ಠಿಕ ಮಕ್ಕಳಿಗೆ ಆರೋಗ್ಯ ಇಲಾಖೆಯ ಪೌಷ್ಠಿಕ ಪುನರ್ವಸತಿ ಕೇಂದ್ರ (NRC) ಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.<br>• ಆರೋಗ್ಯ ಮತ್ತು ಪೌಷ್ಠಿಕ ಶಿಬಿರಗಳನ್ನು ಏರ್ಪಡಿಸಿ ಅಧಿಕ ಪೌಷ್ಠಿಕತೆಯುಳ್ಳ ಆಹಾರಗಳನ್ನು ತಯಾರಿಸುವ ಕುರಿತು ಮತ್ತು ಮಕ್ಕಳಿಗೆ ಪೌಷ್ಠಿಕತೆಯುಳ್ಳ ಆಹಾರವನ್ನು ನೀಡಲು ತಿಳುವಳಿಕೆ ನೀಡಲಾಗುತ್ತದೆ.<br>• ಪ್ರತಿ ತಿಂಗಳು ನಡೆಸುವ ತಾಯಂದಿರ ಸಭೆಗಳಲ್ಲಿ ಅಪೌಷ್ಠಿಕತೆ ನಿವಾರಣೆ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ತಾಯಂದಿರುಗಳಿಗೆ ತಿಳುವಳಿಕೆ ನೀಡಲಾಗುತ್ತದೆ.<br>• ಪೋಷಣ್ ಅಭಿಯಾನ ಯೋಜನೆಯಡಿ ಪ್ರತೀ ತಿಂಗಳು ಎರಡು ಬಾರಿ ಸಮುದಾಯ ಆಧಾರಿತ ಚಟುವಟಿಕೆಗಳನ್ನು ನಡೆಸಲಾಗುತ್ತಿದ್ದು, ತಾಯಂದಿರಿಗೆ ಅಪೌಷ್ಠಿಕತೆ ಬಗ್ಗೆ ತಿಳಿಸಲಾಗುತ್ತಿದೆ.<br>• ಅಂಗನವಾಡಿ ಕೇಂದ್ರಗಳಲ್ಲಿ ಎಲ್ಲಾ ಮಕ್ಕಳ ಆರೋಗ್ಯ ತಪಾಸಣೆಯನ್ನು 3 ತಿಂಗಳಿಗೊಮ್ಮೆ ನಡೆಸಲಾಗುತ್ತಿದೆ. |
| ಆ. | ಅಂಗನವಾಡಿಗಳಲ್ಲಿ ಮಕ್ಕಳು/ ಬಾಣಂತಿಯರಿಗೆ ನೀಡುತ್ತಿರುವ ಆಹಾರ ಪದಾರ್ಥಗಳೇನು; (ಮಾಹಿತಿ ನೀಡುವುದು) | ಅಂಗನವಾಡಿಗಳಲ್ಲಿ ಮಕ್ಕಳು/ ಬಾಣಂತಿಯರಿಗೆ ನೀಡುತ್ತಿರುವ ಆಹಾರ ಪದಾರ್ಥಗಳ ವಿವರವನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ. ಕೋವಿಡ್-19 ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ಅಂಗನವಾಡಿ ಕೇಂದ್ರಗಳಲ್ಲಿ ಬಿಸಿಯೂಟವನ್ನು ತಯಾರಿಸದೇ ಇರುವುದರಿಂದ ಕಚ್ಚಾ ಆಹಾರ ಸಾಮಗ್ರಿಗಳನ್ನು ಫಲಾನುಭವಿಗಳಿಗೆ ವಿತರಿಸಲಾಗುತ್ತಿದೆ. |

| | | |
|---|---|---|
| ಇ. | ಅಂಗನವಾಡಿಗಳಲ್ಲಿನ ಆಹಾರ ಅಕ್ರಮ ಸಾಗಣೆಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು ; | ಅಂಗನವಾಡಿ ಕೇಂದ್ರಗಳಿಗೆ ಆಹಾರ ಸಾಮಗ್ರಿಗಳು ಸರಬರಾಜಾದ ನಂತರ ಬಾಲವಿಕಾಸ ಸಮಿತಿ, ಇಲಾಖೆಯ ಮೇಲ್ವಿಚಾರಕಿಯರು, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಜಿಲ್ಲಾ ನಿರೂಪಣಾಧಿಕಾರಿಗಳು ಹಾಗೂ ಜಿಲ್ಲಾ ಉಪ ನಿರ್ದೇಶಕರು ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲಿಸುತ್ತಿದ್ದಾರೆ. ಬಾಲವಿಕಾಸ ಸಮಿತಿಯ ಸದಸ್ಯರು ಫಲಾನುಭವಿಗಳ ಮನೆಗಳಿಗೆ ಭೇಟಿ ನೀಡಿ ಪೂರಕ ಪೌಷ್ಟಿಕ ಆಹಾರ ತಲುಪಿರುವ ಬಗ್ಗೆ ಖಚಿತಪಡಿಸಿಕೊಳ್ಳುತ್ತಿದ್ದಾರೆ. ಅಕ್ರಮ ಮಾರಾಟ ಮತ್ತು ಸಾಗಾಣಿಕೆ ಬಗ್ಗೆ ದೂರು ಬಂದ ತಕ್ಷಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲು ಸೂಚಿಸಲಾಗಿದೆ. |
| ಈ. | ಕಳೆದ 03 ವರ್ಷಗಳಿಂದ 2021ರ ನವೆಂಬರ್‌ವರೆಗೆ ಅಂಗನವಾಡಿಗಳಿಂದ ಅಕ್ರಮ ಆಹಾರ ಕಳ್ಳತನ ಮತ್ತು ಸಾಗಾಣಿಕೆ ಬಗ್ಗೆ ದಾಖಲಾದ ದೂರುಗಳು ಎಷ್ಟು? (ಜಿಲ್ಲಾವಾರು ವಿವರ ನೀಡುವುದು) | 2019-20 ರಲ್ಲಿ -01 ಪ್ರಕರಣ, 2020-21 ರಲ್ಲಿ- 01 ಪ್ರಕರಣ, ಪ್ರಸ್ತುತ ವರ್ಷದ ನವೆಂಬರ್ 2021 ರವರೆಗೆ -01 ಪ್ರಕರಣವು ದಾಖಲಾಗಿದ್ದು, ಕಳೆದ ಮೂರು ವರ್ಷಗಳಿಂದ 2021 ರ ನವೆಂಬರ್ ವರೆಗೆ ಒಟ್ಟು -03 ದೂರುಗಳು ಸ್ವೀಕೃತವಾಗಿರುತ್ತದೆ. ಜಿಲ್ಲಾವಾರು ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ. |

ಸಂಖ್ಯೆ: ಮಮಇ 291 ಐಸಿಡಿ 2021

(ಆಚಾರ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ
ಹಿರಿಯ ನಾಗರಿಕರ ಸಬಲೀಕರಣ ಸಚಿವರು.

# ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:251 ಕ್ಕೆ ಒದಗಿಸಲಾದ ಅನುಬಂಧ-1

| ಕ್ರ. ಸಂ. | ಜಿಲ್ಲೆಯ ಹೆಸರು | 6 ತಿಂಗಳಿಂದ 3 ವರ್ಷದ ಮಕ್ಕಳಿಗೆ ನೀಡುತ್ತಿರುವ ಆಹಾರ | 3 ವರ್ಷದಿಂದ 6 ವರ್ಷದ ಮಕ್ಕಳಿಗೆ ನೀಡುತ್ತಿರುವ ಆಹಾರ ಪದಾರ್ಥಗಳ ವಿವರ | ಗರ್ಭಿಣಿ ಮತ್ತು ಬಾಣಂತಿಯರಿಗೆ ನೀಡುತ್ತಿರುವ ಆಹಾರ ಪದಾರ್ಥಗಳ ವಿವರ | ಕಿಶೋರಿಯರಿಗೆ ನೀಡುತ್ತಿರುವ ಆಹಾರ ಪದಾರ್ಥಗಳ ವಿವರ |
|---|---|---|---|---|---|
| 1 | 2 | 3 | 4 | 5 | 6 |
| 1 | ಬಾಗಲಕೋಟೆ | ಪುಷ್ಟಿ , ಸಕ್ಕರೆ, ಹಾಲಿನಪುಡಿ | ಅಕ್ಕಿ , ಎಣ್ಣೆ, ಸಾಂಬಾರು ಮಸಾಲ ಹೆಸರು ಕಾಳು ತೊಗರಿಬೇಳೆ ಸಕ್ಕರೆ ಹಾಲಿನ ಪುಡಿ ಮೊಟ್ಟೆ ಶೇಂಗಾ ಬೆಲ್ಲ | ಅಕ್ಕಿ ಶೇಂಗಾ ಎಣ್ಣೆ ಉಪ್ಪು ತರಕಾರಿ ಬೆಲ್ಲ ಹಾಲಿನಪುಡಿ ಸಕ್ಕರೆ ಮೊಟ್ಟೆ | ಗೋಧಿರವೆ ಬೆಲ್ಲ ಅಕ್ಕಿ ಹೆಸರುಕಾಳು |
| 2 | ಬೆಂಗಳೂರು (ಗ್ರಾ.) | ಪುಷ್ಟಿ ,ಬೆಲ್ಲ ,ಸಕ್ಕರೆ ,ಹಾಲಿನ ಪುಡಿ | ಅಕ್ಕಿ ,ತೊಗರಿಬೇಳೆ ,ಹೆಸರುಕಾಳು, ಕಡಲೇ ಬೀಜ, ಸಕ್ಕರೆ ಬೆಲ್ಲ , ಹಾಲಿನ ಪುಡಿ , ಮೊಟ್ಟೆ | ಅಕ್ಕಿ, ತೊಗರಿಬೇಳೆ, ಉಪ್ಪು , ಕಡಲೇ ಬೀಜ, ಹೆಸರು ಕಾಳು, ಸಾಂಬರ್ ಪುಡಿ, ಬೆಲ್ಲ, ಹಾಲಿನ ಪುಡಿ, ಮೊಟ್ಟೆ | ಕಿಶೋರಿಯರು ದಾಖಲಾಗಿರುವುದಿಲ್ಲ |
| 3 | ಬೆಂಗಳೂರು ನಗರ | ಪುಷ್ಟಿ ಸಕ್ಕರೆ ಬೆಲ್ಲ ಹಾಲಿನಪುಡಿ | ಕಡ್ಲೆ ಬೀಜ ಬೆಲ್ಲ ಸಕ್ಕರೆ ತೊಗರಿಬೇಳೆ ಅಕ್ಕಿ ಹೆಸರು ಕಾಳು ಹೆಸರುಬೇಳೆ ಸಾಂಬಾರು ಪುಡಿ ಹಾಲಿನ ಪುಡಿ ಮೊಟ್ಟೆ | ಕಡ್ಲೆ ಬೀಜ ಬೆಲ್ಲ ಸಕ್ಕರೆ ತೊಗರಿಬೇಳೆ ಅಕ್ಕಿ ಹೆಸರು ಕಾಳು ಹೆಸರುಬೇಳೆ ಸಾಂಬಾರು ಪುಡಿ ಹಾಲಿನ ಪುಡಿ ಮೊಟ್ಟೆ | ಹೆಸರುಕಾಳು ಅಕ್ಕಿ ಕಡ್ಲೆ ಬೀಜ ಬೆಲ್ಲ |
| 4 | ಬಳ್ಳಾರಿ | ಪುಷ್ಟಿ ಸಕ್ಕರೆ ಹಾಲಿನಪುಡಿ ಬೆಲ್ಲ | ಹಾಲಿನ ಪುಡಿ ಸಕ್ಕರೆ ಗೋಧಿ ಬೆಲ್ಲ ಶೇಂಗಾ ಅಕ್ಕಿ ತೊಗರಿಬೇಳೆ ಸಾಂಬಾರ್ ಪುಡಿ ಕಡ್ಲೇ ಕಾಳು ಮೊಟ್ಟೆ | ಹಾಲಿನ ಪುಡಿ ಸಕ್ಕರೆ ಬೆಲ್ಲ ಶೇಂಗಾ ಅಕ್ಕಿ ತೊಗರಿಬೇಳೆ ಸಾಂಬಾರ್ ಪುಡಿ ಹೆಸರು ಕಾಳು ಮೊಟ್ಟೆ | 2021-22 ನೇ ಸಾಲಿನಲ್ಲಿ ಶಾಲೆ ಬಿಟ್ಟ ಕಿಶೋರಿಯರು ದಾಖಲಾಗಿರುವುದಿಲ್ಲ |
| 5 | ಬೆಳಗಾವಿ | ಪುಷ್ಟಿ , ಸಕ್ಕರೆ ಹಾಲಿನಪುಡಿ | ಅಕ್ಕಿ, ಎಣ್ಣೆ, ಸಾಂಬಾರು ಮಸಾಲ , ಹೆಸರು ಕಾಳು ತೊಗರಿಬೇಳೆ, ಸಕ್ಕರೆ , ಹಾಲಿನ ಪುಡಿ, ಮೊಟ್ಟೆ | ಅಕ್ಕಿ , ತೊಗರಿಬೇಳೆ, ಎಣ್ಣೆ, ಹಾಲಿನಪುಡಿ, ಸಕ್ಕರೆ ಮೊಟ್ಟೆ ಶೇಂಗಾ ಸಾಂಬಾರು ಮಸಾಲ, ಬೆಲ್ಲ, ಹೆಸರು ಕಾಳು | ಅಕ್ಕಿ ಹೆಸರುಕಾಳು ತೊಗರಿಬೇಳೆ |
| 6 | ಬೀದರ್ | ಪುಷ್ಟಿ, ಸಕ್ಕರೆ, ಹಾಲಿನಪುಡಿ | ಹಾಲಿನ ಪುಡಿ, ಸಕ್ಕರೆ ಅಕ್ಕಿ, ಹೆಸರುಕಾಳು ಶೇಂಗಾ, ಬೆಲ್ಲ, ಸಾಂಬಾರ್ ಮಸಾಲ ಉಪ್ಪು, ಎಣ್ಣೆ, ತೊಗರಿಬೇಳೆ ಮೊಟ್ಟೆ ಸಾಸಿವೆ, ಹೆಸರುಬೇಳೆ ಅಲಸಂದೆಕಾಳು ರವೆ, ಅರಿಶಿನಪುಡಿ ಒಣಮೆಣಸಿನಕಾಯಿ | ಹಾಲಿನ ಪುಡಿ, ಸಕ್ಕರೆ ಅಕ್ಕಿ, ಶೇಂಗಾ, ಬೆಲ್ಲ, ಸಾಂಬಾರ್ ಮಸಾಲ ಉಪ್ಪು, ಎಣ್ಣೆ, ತೊಗರಿಬೇಳೆ, ಮೊಟ್ಟೆ ಸಾಸಿವೆ, ಅರಿಶಿನಪುಡಿ ಒಣಮೆಣಸಿನಕಾಯಿ | ಹಾಲಿನ ಪುಡಿ, ಸಕ್ಕರೆ ಅಕ್ಕಿ, ಶೇಂಗಾ, ಬೆಲ್ಲ, ತೊಗರಿಬೇಳೆ |
| 7 | ವಿಜಯಪುರ | ಪುಷ್ಟಿ ಹಾಲಿನ ಪುಡಿ ಸಕ್ಕರೆ | ಹಾಲಿನ ಪುಡಿ ಸಕ್ಕರೆ ಅಕ್ಕಿ ಮೊಟ್ಟೆ ಗೋಧಿ ಸಾಸಿವೆ ಮೆಣಸಿನಕಾಯಿ ಎಣ್ಣೆ ಉಪ್ಪು ಅರಿಶಿನ ಪುಡಿ ಶೇಂಗಾ ಬೀಜ ಬೆಲ್ಲ ಕಡಲೆಕಾಳು ತೊಗರಿಬೇಳೆ ಸಾಂಬಾರು ಪುಡಿ ಹೆಸರು ಕಾಳು ಅವಲಕ್ಕಿ | ಹಾಲಿನ ಪುಡಿ ಸಕ್ಕರೆ ಅಕ್ಕಿ ಸಾಸಿವೆ ಮೆಣಸಿನಕಾಯಿ ಎಣ್ಣೆ ಉಪ್ಪು ಅರಿಶಿನ ಪುಡಿ ಶೇಂಗಾ ಬೀಜ ಬೆಲ್ಲ ಕಡಲೆಕಾಳು ತೊಗರಿಬೇಳೆ ಸಾಂಬಾರು ಪುಡಿ, ಮೊಟ್ಟೆ ಹೆಸರು ಕಾಳು | ಅಕ್ಕಿ ಗೋಧಿ ಬೆಲ್ಲ ಕಡಲೆಕಾಳು ಹೆಸರು ಕಾಳು |
| 8 | ಚಾಮರಾಜನಗರ | ಪುಷ್ಟಿ , ಸಕ್ಕರೆ, ಹಾಲಿನಪುಡಿ | ಅಕ್ಕಿ ತೊಗರಿ ಬೇಳೆ ಕಡ್ಲೆಕಾಳು ಹಸಿರು ಕಾಳು ಕಡ್ಲೇ ಬೀಜ ಬೆಲ್ಲ ಎಣ್ಣೆ ಉಪ್ಪು ಹಾಲಿನ ಪುಡಿ ಸಕ್ಕರೆ ಕೊಳಿ ಮೊಟ್ಟೆ | ಅಕ್ಕಿ ತೊಗರಿ ಬೇಳೆ ಕಡ್ಲೆ ಕಾಳು ಹಸಿರು ಕಾಳು ಕಡ್ಲೇ ಬೀಜ, ಬೆಲ್ಲ ಎಣ್ಣೆ ಉಪ್ಪು ಹಾಲಿನಪುಡಿ ಸಕ್ಕರೆ ಕೋಳಿ ಮೊಟ್ಟೆ | ಅಕ್ಕಿ- ತೊಗರಿ ಬೇಳೆ ಬೆಲ್ಲ |
| 9 | ಚಿಕ್ಕಬಳ್ಳಾಪುರ | ಪುಷ್ಟಿ, ಬೆಲ್ಲ, ಸಕ್ಕರೆ, ಹಾಲಿನ ಪುಡಿ | ಅಕ್ಕಿ, ತೊಗರಿಬೇಳೆ , ಹೆಸರುಕಾಳು, ಕಡಲೇ ಬೀಜ, ಸಕ್ಕರೆ, ಬೆಲ್ಲ, ಹಾಲಿನ ಪುಡಿ, ಮೊಟ್ಟೆ | ಅಕ್ಕಿ, ಗೋಧಿ, ತೊಗರಿಬೇಳೆ, ಉಪ್ಪು, ಕಡಲೇಬೀಜ, ಹೆಸರು ಕಾಳು, ಬೆಲ್ಲ, ಹಾಲಿನ ಪುಡಿ, ಮೊಟ್ಟೆ | ಅಕ್ಕಿ, ಬೆಲ್ಲ, ಕಡಲೇ ಬೀಜ, ಹೆಸರು ಕಾಳು |
| 10 | ಚಿಕ್ಕಮಗಳೂರು | ಪುಷ್ಟಿ , ಸಕ್ಕರೆ , ಹಾಲಿನಪುಡಿ | ಅಕ್ಕಿ, ಎಣ್ಣೆ, ಸಾಂಬಾರು ಮಸಾಲ, ಶೇಂಗಾಚಿಕ್ಕಿ , ಹೆಸರು ಕಾಳು, ಕಡಲಕಾಳು ತೊಗರಿಬೇಳೆ, ಉಪ್ಪು, ಮೆಣಸಿನಕಾಯಿ, ಸಕ್ಕರೆ, ತರಕಾರಿ, ಹಾಲಿನ ಪುಡಿ, ಮೊಟ್ಟೆ | ಅಕ್ಕಿ , ತೊಗರಿಬೇಳೆ, ಎಣ್ಣೆ-, ಹಾಲಿನಪುಡಿ, ಸಕ್ಕರೆ, ಮೊಟ್ಟೆ-, ತರಕಾರಿ, ಶೇಂಗಾ ಚಿಕ್ಕಿ, ಸಾಂಬಾರು ಮಸಾಲ, ಉಪ್ಪು, | ಅಕ್ಕಿ ಹೆಸರುಕಾಳು |
| 11 | ಚಿತ್ರದುರ್ಗ | ಪುಷ್ಟಿ ಅಕ್ಕಿ ರವೆ ಹಾಲಿನ ಪುಡಿ ಸಕ್ಕರೆ | ಶೇಂಗಾ ಬೀಜ ಬೆಲ್ಲ ಹೆಸರುಕಾಳು ಫಾರ್ಟಿಫೈಡ್ ಅಕ್ಕಿ ತೊಗರಿಬೇಳೆ- ತಾಳೆ ಎಣ್ಣೆ- ಸಾಂಬಾರ್ ಪುಡಿ-ಉಪ್ಪು-ಕಡ್ಲೆಬೇಳೆ- ಅಕ್ಕಿ ರವೆ- ಹಾಲಿನ ಪುಡಿ ಮೊಟ್ಟೆ | ಅಕ್ಕಿತೊಗರಿಬೇಳೆ-ಸಾಂಬಾರ್ ಪುಡಿ ಎಣ್ಣೆ ಉಪ್ಪು- ಅಕ್ಕಿ ರವೆ- ಕಡ್ಲ ಬೇಳೆ- ಬೆಲ್ಲ- ಹಾಲಿನಪುಡಿ, ಮೊಟ್ಟೆ, -ಸಕ್ಕರೆ- ಶೇಂಗಾಬೀಜ- | ಗೋಧಿ ಹೆಸರುಕಾಳು |
| 12 | ದಾವಣಗೆರೆ | ಪುಷ್ಟಿ ಬೆಲ್ಲ ಸಕ್ಕರೆ ಹಾಲಿನ ಪುಡಿ | ಶೇಂಗಾ ಬೀಜ ಬೆಲ್ಲ ಅಕ್ಕಿ ಪಾಮ್ ಆಯಿಲ್ ತೊಗರಿಬೇಳೆ ಸಾಂಬಾರ್ ಪುಡಿ ಉಪ್ಪು ಸಕ್ಕರೆ ಹೆಸರುಕಾಳು ಗೋಧಿರವೆ ಕಡ್ಲಬೇಳೆ, ಹಾಲಿನ ಪುಡಿ ಮೊಟ್ಟೆ | ಅಕ್ಕಿ ತೊಗರಿಬೇಳೆ ಪಾಮ್ ಆಯಿಲ್ ಉಪ್ಪು ಸಾಸಿವೆ ಸಾಂಬಾರ್ ಪುಡಿ ಹಾಲು ಸಕ್ಕರೆ ಬೆಲ್ಲ ಶೇಂಗಾ ಹೆಸರುಕಾಳು ಮೊಟ್ಟೆ ತರಕಾರಿ ಗೋಧಿರವೆ ಕಡ್ಲಬೆಳೆ | ಅಕ್ಕಿ ಹೆಸರುಕಾಳು ಗೋಧಿರವೆ |

| ಕ್ರ. ಸಂ. | ಜಿಲ್ಲೆಯ ಹೆಸರು | 6 ತಿಂಗಳಿಂದ 3 ವರ್ಷದ ಮಕ್ಕಳಿಗೆ ನೀಡುತ್ತಿರುವ ಆಹಾರ | 3 ವರ್ಷದಿಂದ 6 ವರ್ಷದ ಮಕ್ಕಳಿಗೆ ನೀಡುತ್ತಿರುವ ಆಹಾರ ಪದಾರ್ಥಗಳ ವಿವರ | ಗರ್ಭಿಣಿ ಮತ್ತು ಬಾಣಂತಿಯರಿಗೆ ನೀಡುತ್ತಿರುವ ಆಹಾರ ಪದಾರ್ಥಗಳ ವಿವರ | ಕಿಶೋರಿಯರಿಗೆ ನೀಡುತ್ತಿರುವ ಆಹಾರ ಪದಾರ್ಥಗಳ ವಿವರ |
|---|---|---|---|---|---|
| 13 | ದಕ್ಷಿಣ ಕನ್ನಡ | ಬಹುಧಾನ್ಯ ನ್ಯೂಟ್ರಿಮಿಕ್ಸ್ (ಪುಷ್ಠಿ) ಸಕ್ಕರೆ ಹಾಲಿನ ಹುಡಿ | ಅಕ್ಕಿ ಗೋಧಿ ಹೆಸರುಕಾಳು ಹುರುಳಿಕಾಳು ಶೇಂಗಾಬೀಜ ಬೆಲ್ಲ ತೊಗರಿಬೇಳೆ ಕೆನೆಭರಿತ ಹಾಲಿನ ಹುಡಿ ಸಕ್ಕರೆ ಕೋಳಿಮೊಟ್ಟೆ | ಅಕ್ಕಿ ಹುರುಳಿಕಾಳು ಶೇಂಗಾ ಬೀಜ ಬೆಲ್ಲ ಸಕ್ಕರೆ ತೊಗರಿಬೇಳೆ ಕೆನೆಭರಿತ ಹಾಲಿನ ಪುಡಿ ಕೋಳಿಮೊಟ್ಟೆ ತರಕಾರಿ | - |
| 14 | ಧಾರವಾಡ | ಪುಷ್ಠಿ ಹಾಲಿನ ಪುಡಿ ಸಕ್ಕರೆ | ಬೆಲ್ಲ ಗೋಧಿ ಅಕ್ಕಿ ತೊಗರಿಬೇಳೆ ಸಕ್ಕರೆ ಹೆಸರುಕಾಳು ಮಸಾಲೆ ಶೇಂಗಾ ಚಿಕ್ಕಿ ಹಾಲಿನ ಪುಡಿ ಮೊಟ್ಟೆ | ಬೆಲ್ಲ ಗೋಧಿ ಸಕ್ಕರೆ ಹಾಲಿನಪುಡಿ ಶೇಂಗಾ ಚಿಕ್ಕಿ ಅಕ್ಕಿ ತೊಗರಿಬೇಳೆ ಹೆಸರುಕಾಳು ಮಸಾಲಾ ಎಣ್ಣೆ ಮೊಟ್ಟೆ | ಬೆಲ್ಲ ಗೋಧಿ ಶೇಂಗಾ ಅಕ್ಕಿ ತೊಗರಿಬೇಳೆ ಹೆಸರುಕಾಳು |
| 15 | ಗದಗ್ | ಪುಷ್ಠಿ ಮೊರಿಂಗಾ ಪೌಡರ, ಹಾಲಿನ ಪುಡಿ, ಸಕ್ಕರೆ | ಬೆಲ್ಲ, ಗೋಧಿ, ಅಕ್ಕಿ ತೋಗರಿಬೆಳೆ, ಸಕ್ಕರೆ. ಹೆಸರುಕಾಳು ಮಸಾಲೆ, ಶೇಂಗಾಚಿಕ್ಕಿ, ಹಾಲಿನಪುಡಿ , ಮೊಟ್ಟೆ | ಬೆಲ್ಲ, ಗೋಧಿ, ಅಕ್ಕಿ, ತೋಗರಿಬೆಳೆ ಸಕ್ಕರೆ- ಹೆಸರುಕಾಳು, ಮಸಾಲೆ, ಶೇಂಗಾಚಿಕ್ಕಿ, ಹಾಲಿನಪುಡಿ ಎಣ್ಣೆ, ಮೊಟ್ಟೆ | ಬೆಲ್ಲ ಗೋಧಿ, ಶೇಂಗಾ, ಅಕ್ಕಿ, ತೋಗರಿಬೆಳೆ, ಹೆಸರುಕಾಳು, |
| 16 | ಕಲ್ಬುರ್ಗಿ | ಪುಷ್ಟಿ ಸಕ್ಕರೆ ಹಾಲಿನ ಪುಡಿ | ಹೆಸರು ಕಾಳು ಎಣ್ಣೆ ಒಣ ಮೆಣಸಿನಕಾಯಿ ಅಯೋಡಿನ್ ಉಪ್ಪು ಸಾಸಿವೆ ಗೋಧಿ ನುಚ್ಚು ಕಡಲೆ ಬೇಳೆ ಬೆಲ್ಲ ಕೆನೆಸಹಿತ ಹಾಲು ಸಕ್ಕರೆ ಅಕ್ಕಿ ತೊಗರಿ ಬೇಳೆ ಸಾಂಬರ ಮಸಾಲಾ ಮೊಟ್ಟೆ | ಅಕ್ಕಿ ತೊಗರಿ ಬೇಳೆ ಎಣ್ಣೆ ಸಾಸಿವೆ ಅಯೋಡಿನ ಉಪ್ಪು ಒಣ ಮೆಣಸಿನಕಾಯಿ ಸಾಂಬಾರ ಮಸಾಲಾಪುಡಿ ತರಕಾರಿ ಶೇಂಗಾ ಬೀಜ ಬೆಲ್ಲ ಕೋಳಿ ಮೊಟ್ಟೆ ಕೆನೆಸಹಿತ ಹಾಲು ಸಕ್ಕರೆ | ಅಕ್ಕಿ ತೊಗರಿ ಬೇಳೆ ಶೇಂಗಾ ಬೀಜ ಬೆಲ್ಲಾ ಗೋದಿ ನುಚ್ಚು |
| 17 | ಹಾಸನ | ರಾಗಿಹಿಟ್ಟು, ಪುಷ್ಠಿ ಸಕ್ಕರೆ ಹಾಲಿನ ಪುಡಿ | ಕಡಲೇಬೀಜ, ಬೆಲ್ಲ,ಹೆಸರುಕಾಳು, ಒಣಮೆಣಸಿನಕಾಯಿ, ಫಾಮಾಯಿಲ್, ಸಾಸಿವೆ, ಉಪ್ಪು, ಕಡಲೇಕಾಳು,ಅಕ್ಕಿ, ತೊಗರಿಬೇಳೆ, ಕಡಲೇಕಾಳು, ಮಸಾಲೆ ಪುಡಿ,, ಕಡಲೇಬೇಳೆ, ಹಾಲಿನಪುಡಿ, ಮೊಟ್ಟೆ, | ಅಕ್ಕಿ, ತೊಗರಿಬೇಳೆ, ಸಾಂಬಾರ್ ಪೌಡರ್, ಫಾಮಾಯಿಲ್, ಉಪ್ಪು, ಹಾಲಿನಪುಡಿ, ಮೊಟ್ಟೆ, ಮೊಳಕೆ ಭರಿಸಿದ ಹೆಸರುಕಾಳು,ಕಡಲೇಬೀಜ, ಬೆಲ್ಲ, ಸಕ್ಕರೆ | ರಾಗಿ, ಕಡಲೇಬೀಜ, ಬೆಲ್ಲ. |
| 18 | ಹಾವೇರಿ | ಪೋಷಕ ಆಹಾರ ಬೆಲ್ಲ ಮತ್ತು ಹೆಸರ ಬೇಳೆ ಸಕ್ಕರೆ ಹಾಲು | ಶೆಂಗಾ ಬೆಲ್ಲ ಅಕ್ಕಿ ,ತೊಗರಿ ಬೇಳೆ ,ಉಪ್ಪು & ಎಣ್ಣೆ ಗೋದಿರವೆ, ಹೆಸರು ಬೇಳೆ, ಸಾಸಿವೆ, ಮೆಣಸಿನಕಾಯಿ, ಹೆಸರುಕಾಳು, ಸಕ್ಕರೆ ಹೆಸರುಬೇಳೆ, ಹಾಲಿನಪುಡಿ, ಮೊಟ್ಟೆ, | ಶೆಂಗಾ ಚಿಕ್ಕಿ, ಕೋಳಿ ಮೊಟ್ಟೆ ಅಕ್ಕಿ, ತೋಗರಿಬೇಳೆ, ಎಣ್ಣೆ, ಸಾಸಿವೆ, ಮೆಣಸಿನಕಾಯಿ, ಉಪ್ಪು, ಶೆಂಗಾಚಿಕ್ಕಿ, ಹಾಲಿನ ಪುಡಿ ಸಕ್ಕರೆ | ಹೆಸರಕಾಳು, ಅಕ್ಕಿ, ಗೋಧಿ, ಬೆಲ್ಲ ಹಾಗೂ ಉಪ್ಪು ಹೆಸರಕಾಳು, ಅಕ್ಕಿ, ಗೋಧಿ, ಬೆಲ್ಲ, ಉಪ್ಪು |
| 19 | ಕೊಡಗು | ಪುಷ್ಠಿ ಹೆಸರು ಬೇಳೆ ಶೇಂಗಾ ಬೀಜ ಹಾಲಿನ ಪುಡಿ ಸಕ್ಕರೆ | ಅಕ್ಕಿ ತೊಗರಿಬೇಳೆ ಹೆಸರು ಕಾಳು ಶೇಂಗಾಬೀಜ ಹಾಲಿನ ಪುಡಿ ಸಕ್ಕರೆ ಮೊಟ್ಟೆ | ಅಕ್ಕಿ ತೊಗರಿಬೇಳೆ ಹೆಸರು ಕಾಳು ಶೇಂಗಾಬೀಜ ಹಾಲಿನ ಪುಡಿ ಸಕ್ಕರೆ ಮೊಟ್ಟೆ | ಅಕ್ಕಿ ತೊಗರಿಬೇಳೆ ಹೆಸರು ಕಾಳು ಶೇಂಗಾಬೀಜ |
| 20 | ಕೋಲಾರ | ಪುಷ್ಟಿ ಹಾಲಿನ ಪುಡಿ ಸಕ್ಕರೆ | ಸಕ್ಕರೆ ಕಡಲೇಬೀಜ ಬೆಲ್ಲ ಅಕ್ಕಿ ತೊಗರಿಬೇಳೆ ತರಕಾರಿ ಸಾಂಬರ್ ಪುಡಿ ಸಾಸುವೆ ಉಪ್ಪು ಎಣ್ಣೆ ಹೆಸರುಕಾಳು ಹಾಲಿನಪುಡಿ, ಮೊಟ್ಟೆ, | ಅಕ್ಕಿ ತೊಗರಿಬೇಳೆ ಎಣ್ಣೆ ಹಾಲಿನ ಪುಡಿ ಸಕ್ಕರೆ ಮೊಟ್ಟೆ ತರಕಾರಿ ಸಾಂಬರ್ ಪುಡಿ ಸಾಸುವೆ ಉಪ್ಪು ಕಡಲೇಬೀಜ ಬೆಲ್ಲ ಮೊಟ್ಟೆ ತಿನ್ನದವರಿಗೆ ಮೊಳಕೆ ಭರಿಸಿದ ಹೆಸರು ಕಾಳು | ಗೋಧಿ ಅಕ್ಕಿ ಹೆಸರುಕಾಳು ಕಡಲೇಬೀಜ ಬೆಲ್ಲ |
| 21 | ಕೊಪ್ಪಳ | ಪುಷ್ಟಿ ಹಾಲಿನ ಪುಡಿ ಸಕ್ಕರೆ | ಶೇಂಗಾ ಬೆಲ್ಲ ಹೆಸರು ಕಾಳು ರಾಗಿ ಮಾಲ್ಟ್ ಮೋರಿಂಗಾ ಮಿಶ್ರೀತ ಅಕ್ಕಿ ರವೆ ಸಕ್ಕರೆ ಅಕ್ಕಿ ಅಕ್ಕಿರವೆ ಮೋರಿಂಗಾ ಪೌಡರ್ ಹಾಲಿನಪುಡಿ, ಮೊಟ್ಟೆ, | ಶೇಂಗಾ ಬೆಲ್ಲ ಹೆಸರು ಕಾಳು ರಾಗಿ ಮಾಲ್ಟ್ ಮೋರಿಂಗಾ ಮಿಶ್ರೀತ ಅಕ್ಕಿ ರವೆ ಸಕ್ಕರೆ ಅಕ್ಕಿ ಮೊಟ್ಟೆ ಹಾಲಿನ ಪುಡಿ ಗೋಧಿ | |
| 22 | ಮಂಡ್ಯ | ಪುಷ್ಟಿ ಹಾಲಿನ ಪುಡಿ ಸಕ್ಕರೆ | ಅಕ್ಕಿ , ಸಾಂಬಾರು ಪುಡಿ , ಕಡಲೆಕಾಯಿಬೀಜ , ಬೆಲ್ಲ, ಹೆಸರು ಕಾಳು- ತೊಗರಿಬೇಳೆ , ಸಕ್ಕರೆ , ಹಾಲಿನ ಪುಡಿ, ಮೊಟ್ಟೆ | ಅಕ್ಕಿ , ತೊಗರಿಬೇಳೆ, ಹಾಲಿನಪುಡಿ, ಸಕ್ಕರೆ ಮೊಟ್ಟೆ, ಕಡಲೆಕಾಯಿ ಬೀಜ, ಸಾಂಬಾರು ಪುಡಿ, ಬೆಲ್ಲ, ಹೆಸರುಕಾಳು | ಅಕ್ಕಿ, ಗೋಧಿ, ಹೆಸರುಕಾಳು, ಬೆಲ್ಲ |
| 23 | ಮೈಸೂರು | ಪುಷ್ಟಿ ಹಾಲಿನ ಪುಡಿ ಸಕ್ಕರೆ | ಅಕ್ಕಿ, ಹೆಸರು ಕಾಳು, ಕಡಲೆಕಾಳು-, ಶೇಂಗಾಬೀಜ, ಸಕ್ಕರೆ , ಹಾಲಿನ ಪುಡಿ, ಮೊಟ್ಟೆ | ಅಕ್ಕಿ, ಹೆಸರು ಕಾಳು-,ಕಡಲೆಕಾಳು, ತೊಗರಿ ಬೇಳೆ, ಶೇಂಗಾಬೀಜ, ಸಕ್ಕರೆ, ಹಾಲಿನ ಪುಡಿ, ಮೊಟ್ಟೆ , ಚಿಕ್ಕಿ (ಮೊಟ್ಟೆ ತಿನ್ನದವರಿಗೆ-ಕಡಲೆಕಾಳು) | ಕಡಲೆಕಾಳು, ತೊಗರಿ ಬೇಳೆ, ಶೇಂಗಾಬೀಜ, ಗೋದಿ |
| 24 | ರಾಮನಗರ | ಪುಷ್ಠಿ ಸಕ್ಕರೆ ಹಾಲಿನ ಪುಡಿ | ಅಕ್ಕಿ, ಶೇಂಗಾಬೀಜ, ಬೆಲ್ಲ, ಸಕ್ಕರೆ, ತೊಗರಿಬೇಳೆ, ಹೆಸರುಕಾಳು, ಹೆಸರುಬೇಳೆ, ಅವಲಕ್ಕಿ,ಹಾಲಿನಪುಡಿ, ಮೊಟ್ಟೆ, | ಶೇಂಗಾ ಬೀಜ, ಬೆಲ್ಲ, ಸಕ್ಕರೆ, ತೊಗರಿಬೇಳೆ, ಅಕ್ಕಿ, ಹೆಸರುಬೇಳೆ, ಅವಲಕ್ಕಿ, ಹಾಲಿನಪುಡಿ, ಮೊಟ್ಟೆ, (ಮೊಟ್ಟೆ ತಿನ್ನದವರಿಗೆ ಹೆಸರುಕಾಳು) | - |

| ಕ್ರ. ಸಂ. | ಜಿಲ್ಲೆಯ ಹೆಸರು | 6 ತಿಂಗಳಿಂದ 3 ವರ್ಷದ ಮಕ್ಕಳಿಗೆ ನೀಡುತ್ತಿರುವ ಆಹಾರ | 3 ವರ್ಷದಿಂದ 6 ವರ್ಷದ ಮಕ್ಕಳಿಗೆ ನೀಡುತ್ತಿರುವ ಆಹಾರ ಪದಾರ್ಥಗಳ ವಿವರ | ಗರ್ಭಿಣಿ ಮತ್ತು ಬಾಣಂತಿಯರಿಗೆ ನೀಡುತ್ತಿರುವ ಆಹಾರ ಪದಾರ್ಥಗಳ ವಿವರ | ಕಿಶೋರಿಯರಿಗೆ ನೀಡುತ್ತಿರುವ ಆಹಾರ ಪದಾರ್ಥಗಳ ವಿವರ |
|---|---|---|---|---|---|
| 25 | ರಾಯಚೂರು | ಪುಷ್ಠಿ, ಸಕ್ಕರೆ ಹಾಲಿನ ಪುಡಿ | ಹೆಸರು ಕಾಳು, ಶೇಂಗಾ ಬೀಜ, ಬೆಲ್ಲ, ಹೆಸರುಬೇಳೆ-, ಅಕ್ಕಿ, ಕಡಲೆಬೇಳೆ, ಅಕ್ಕಿ ತೌಡು ಎಣ್ಣೆ, ಒಣ ಮೆಣಸಿನ ಕಾಯಿ, ಉಪ್ಪು, ಜೀರಿಗೆ ಕೊಬ್ಬರಿ ಬಾಲ್ ಹಾಲಿನಪುಡಿ, ಮೊಟ್ಟೆ, | ಅಕ್ಕಿ ತೊಗರೆಬೇಳೆ ಅಕ್ಕಿ ತೌಡು ಎಣ್ಣೆ ಹಾಲು, ಮೊಟ್ಟೆ, ತರಕಾರಿ, ಮಸಾಲ ಪದಾರ್ಥ, ಉಪ್ಪು, ಶೇಂಗಾ ಬೀಜ, ಬೆಲ್ಲ | ಅಕ್ಕಿ, ತೊಗರೆಬೇಳೆ, ಜೀರಿಗೆ , ಒಣ ಮೆಣಸಿನಕಾಯಿ, ಉಪ್ಪು, ಗೋಧಿ, ರಾಗಿ |
| 26 | ಶಿವಮೊಗ್ಗ | ಪುಷ್ಠಿ, ಸಕ್ಕರೆ ಹಾಲಿನ ಪುಡಿ | ಹೆಸರುಕಾಳು , ಕಡಲೆಕಾಳು ಅಕ್ಕಿ ತೊಗರಿಬೇಳೆ ಸಾಂಬಾರ್ ಪುಡಿ ಶೆಂಗಾ ಚಿಕ್ಕಿ ಸಕ್ಕರೆ ಹಾಲಿನಪುಡಿ, ಮೊಟ್ಟೆ, | ಹೆಸರುಕಾಳು ಅಕ್ಕಿ , ತೊಗರಿಬೇಳೆ ಸಾಂಬಾರ್ ಪುಡಿ ,ಶೆಂಗಾ ಚಿಕ್ಕಿ , ಸಕ್ಕರೆ , ಮೊಟ್ಟೆ , ಹಾಲಿನ ಪುಡಿ | ಅಕ್ಕಿ , ಕಡಲೆಕಾಳು , ಹೆಸರುಕಾಳು , ಹೆಸರು ಬೆಳೆ |
| 27 | ತುಮಕೂರು | ಹಾಲಿನಪುಡಿ ಸಕ್ಕರೆ ಪುಷ್ಠಿ ಬೆಲ್ಲ | ಹಾಲಿನಪುಡಿ ಸಕ್ಕರೆ ಹೆಸರುಕಾಳು ಶೇಂಗಾಬೀಜ ಬೆಲ್ಲ ಕಡ್ಲೆಕಾಳು ತೊಗರಿಬೇಳೆ ಸಾಂಬಾರುಪುಡಿ ಅಕ್ಕಿ ಕೋಳಿಮೊಟ್ಟೆ | ಹಾಲಿನಪುಡಿ ಸಕ್ಕರೆ ಹೆಸರುಕಾಳು ಶೇಂಗಾಬೀಜ ಬೆಲ್ಲ ಕಡ್ಲೆಕಾಳು ತೊಗರಿಬೇಳೆ ಸಾಂಬಾರುಪುಡಿ ಅಕ್ಕಿ ಕೋಳಿಮೊಟ್ಟೆ | ಅಕ್ಕಿ ಗೋಧಿ ಬೆಲ್ಲ ಹೆಸರುಕಾಳು ಕಡ್ಲೆಕಾಳು |
| 28 | ಉಡುಪಿ | ಪುಷ್ಠಿ, ಹಾಲಿನ ಪುಡಿ ಸಕ್ಕರೆ | ಅಕ್ಕಿ, ತೊಗರಿಬೇಳೆ, ಮಸಾಲ, ಕಡ್ಲೆ ಕಾಳು, ಶೇಂಗಾಚಿಕ್ಕಿ, ಹಾಲು ಸಕ್ಕರೆ, ಮೊಟ್ಟೆ | ಅಕ್ಕಿ, ತೊಗರಿಬೇಳೆ, ಮಸಾಲ, ಶೇಂಗಾಚಿಕ್ಕಿ, ಹಾಲು, ಮೊಟ್ಟೆ | - |
| 29 | ಉತ್ತರಕನ್ನಡ | ಪುಷ್ಠಿ ಸಕ್ಕರೆ ಹಾಲಿನಪುಡಿ | ಅಕ್ಕಿ ಎಣ್ಣೆ ಸಾಂಬಾರು ಮಸಾಲ ಶೇಂಗಾಚಿಕ್ಕಿ ಹೆಸರು ಕಾಳು ಕಡಲೆಕಾಳು ತೊಗರಿಬೇಳೆ , ಹೆಸರು ಬೇಳೆ ಉಪ್ಪು ಗೋದಿ ರವಾ ಬೆಲ್ಲ ಶೇಂಗಾ ಬೀಜ ಹಾಲಿನ ಪುಡಿ, ಮೊಟ್ಟೆ ತರಕಾರಿ | ಅಕ್ಕಿ ಎಣ್ಣೆ ಸಾಂಬಾರು ಮಸಾಲ ಶೇಂಗಾಚಿಕ್ಕಿ ಹೆಸರು ಕಾಳು ಕಡಲೆಕಾಳು, ತೊಗರಿಬೇಳೆ ಉಪ್ಪು ಮೆಣಸಿನಕಾಯಿ, ಸಕ್ಕರೆ ತರಕಾರಿ ಹಾಲಿನ ಪುಡಿ ಮೊಟ್ಟೆ | ಅಕ್ಕಿ ಗೋದಿ ರವಾ ಹೆಸರುಕಾಳು ಹಾಲಿನ ಪುಡಿ |
| 30 | ಯಾದಗಿರಿ | ಪುಷ್ಟಿ ನ್ಯೂಟ್ರೀ ಮೀಕ್ಸ ಹಾಲಿನ ಪುಡಿ ಸಕ್ಕರೆ | ಹೆಸರು ಕಾಳು ಶೇಂಗಾ ಅಕ್ಕಿತೋಗರಿ ಬೇಳೆ ಬೆಲ್ಲ ಹಾಲಿನಪುಡಿ ಸಕ್ಕರೆ ಮೊಟ್ಟೆ | ಶೇಂಗಾ ಅಕ್ಕಿ ತೋಗರಿ ಬೇಳೆ ಹಾಲಿನಪುಡಿ ಸಕ್ಕರೆ ಮೊಟ್ಟೆ | ಅಕ್ಕಿ ತೋಗರಿ ಬೇಳೆ ಹೆಸರು ಕಾಳು ಶೇಂಗಾ ಕಡಲೆ ಬೇಳೆ |

ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಬೆಂಗಳೂರು.

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:251 ಕ್ಕೆ ಒದಗಿಸಲಾದ ಅನುಬಂಧ-2**

| ಕ್ರ. ಸಂ. | ವರ್ಷ | ಜಿಲ್ಲೆ | ವಿಷಯ |
|---|---|---|---|
| 1 | 2019-20 | ದಾವಣಗೆರೆ | ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಜಗಳೂರು ಈ ಯೋಜನೆಯಲ್ಲಿ ಪಡಿತರ ಅಕ್ಕಿ ಮತ್ತು ಗೋಧಿ ದುರುಪಯೋಗವಾಗಿರುವ ಪ್ರಕರಣದಲ್ಲಿ ಸಂಬಂಧಪಟ್ಟ ಲೆಕ್ಕಿಗರ ವಿರುದ್ಧ FIR ದಾಖಲಾಗಿದ್ದು, ಕ್ರಿಮಿನಲ್ ಪ್ರಕರಣ ನಡೆಸಲಾಗುತ್ತಿದೆ ಹಾಗೂ ಲೆಕ್ಕಿಗರನ್ನು ಅಮಾನತ್ತು ಗೊಳಿಸಲಾಗಿರುತ್ತದೆ. ಪ್ರಕರಣಕ್ಕೆ ಸಂಬಂಧಿಸಿದಂತೆ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಮತ್ತು ಲೆಕ್ಕಿಗರ ವಿರುದ್ಧ ಶಿಸ್ತುವ್ಯವಹರಣೆ ಪ್ರಾರಂಭಿಸಲಾಗುತ್ತಿದೆ. |
| 2 | 2020-21 | ಬಾಗಲಕೋಟೆ ಮತ್ತು ವಿಜಯಪುರ | ಅಂಗನವಾಡಿ ಕೇಂದ್ರಗಳ ಫಲಾನುಭವಿಗಳಿಗೆ ವಿತರಣೆ ಮಾಡಬೇಕಾಗಿದ್ದ ಹಾಲಿನ ಪುಡಿಯನ್ನು ಅಕ್ರಮ ಮಾರಾಟ ಮಾಡಿರುವ ಪ್ರಕರಣದಲ್ಲಿ **ಮೂವರು** ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಮತ್ತು **ಇಬ್ಬರು** ಪ್ರಥಮ ದರ್ಜೆ ಸಹಾಯಕರು ದಸ್ತಗಿರಿಯಾಗಿದ್ದು, ನಂತರ ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ. ಮೇಲಿನ ಸರ್ಕಾರಿ ಅಧಿಕಾರಿ ಮತ್ತು ನೌಕರರನ್ನು ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸ ಲಾಗಿರುತ್ತದೆ. ಪ್ರಕರಣದ ಸಂಬಂಧ ಶಿಸ್ತುವ್ಯವಹರಣೆ ಜರುಗಿಸಲು ಕ್ರಮ ವಹಿಸಲಾಗುತ್ತಿದೆ. |
| 3 | 2021-ನವೆಂಬರ್ ವರೆಗೆ | ಧಾರವಾಡ | ನವಲಗುಂದ ಶಿಶು ಅಭಿವೃದ್ಧಿ ಯೋಜನೆಯ ಅಂಗನವಾಡಿ ಕೇಂದ್ರಗಳಿಗೆ ಸಮರ್ಪಕವಾಗಿ ಪೂರಕ ಪೌಷ್ಟಿಕ ಆಹಾರ ಸಾಮಗ್ರಿಗಳನ್ನು ಸರಿಯಾಗಿ ಪೂರೈಕೆ ಮಾಡದಿರುವ ಕುರಿತು ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ಇವರನ್ನು ಕೋರಲಾಗಿರುತ್ತದೆ. ಅದರಂತೆ, ಅಕ್ಟೋಬರ್ 2021ರ ಮಾಹೆಯಲ್ಲಿ ಜಿಲ್ಲಾಧಿಕಾರಿಗಳಿಂದ ವರದಿ ಸ್ವೀಕೃತವಾಗಿರುತ್ತದೆ. ಅದರಂತೆ ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿ, ನವಲಗುಂದ ಇವರು ಆಹಾರ ಸಾಮಗ್ರಿಗಳನ್ನು ಸರ್ಕಾರದ ಮಾರ್ಗಸೂಚಿ ಅನುಸಾರ ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಮಾಡದೇ ಕರ್ತವ್ಯಲೋಪ ಎಸಗಿರುತ್ತಾರೆಂದು ವರದಿ ನೀಡಿರುತ್ತಾರೆ. ಸಂಬಂಧಪಟ್ಟ ಶಿಶು ಅಬಿವೃದ್ಧಿ ಯೋಜನಾಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಬಗ್ಗೆ ಕ್ರಮ ವಹಿಸಲಾಗುತ್ತಿದೆ. |